**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **31.07.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 3ನೇ ಎದುರುದಾರರರ ಪರಃ ಶ್ರೀ ವಕೀಲರಿಂದ:**

ದಿನಾಂಕ 05.01.2017 ರಂದು ಅಪಘಾತವಾಗಿರುತ್ತದೆ. ನಾನು ಊರಿನಿಂದ ಮಳವಳ್ಳಿಗೆ ಬೈಕಿನಲ್ಲಿ ಬರುತ್ತಿದ್ದಾಗ ಅಪಘಾತವಾಗಿರುತ್ತದೆ. ಸದರಿ ಬೈಕಿನ ನೊಂದಣಿ ಸಂಖ್ಯೆ 7224 ಅಗಿದ್ದು ನನಗೆ ಸೇರಿದ್ದಾಗಿರುತ್ತದೆ. ಅದನ್ನು ನಾನೇ ಚಾಲನೆ ಮಾಡುತ್ತಿದ್ದೆ. ಬೈಕು ಚಾಲನೆ ಮಾಡಲು ನನ್ನ ಬಳಿ ಪರವಾನಿಗೆ ಇದ್ದು, ಅದನ್ನು ಹಾಜರುಪಡಿಸಿರುತ್ತೇನೆ. ಅದು ಯಾವ ವಿಮಾ ಕಂಪನಿಗೆ ಒಳಪಟ್ಟಿದೆ ಎಂದು ಗೊತ್ತಿರುವುದಿಲ್ಲ. ಎದುರುಗಡೆಯಿಂದ ಬರುತ್ತಿದ್ದ ಬೈಕು ನಮ್ಮ ಬೈಕಿಗೆ ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ. ಸದರಿ ಬೈಕಿನ ನಂಬರ್ ನನಗೆ ಗೊತ್ತಿರುವುದಿಲ್ಲ. ಎದುರು ಬೈಕಿನ ಚಾಲಕನಿಗೆ ಪೆಟ್ಟಾಗಿರುತ್ತದೆ ಇಲ್ಲವೋ ನೋಡಿರುವುದಿಲ್ಲ. ಎದುರು ಬೈಕಿನ ಚಾಲಕನು ಪೋಲೀಸರಿಗೆ ದೂರು ನೀಡಿದ್ದರು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಎದುರು ಬೈಕಿನವರು ಮೊದಲು ದೂರು ಕೊಟ್ಟಿರುತ್ತಾರೆ ಎಂದು ನನ್ನ ಹೇಳಿಕೆಯನ್ನು ಪೋಲೀಸರು ಪಡೆದಿರುವುದಿಲ್ಲ. ನಾನು ಈ ಬಗ್ಗೆ ಪೋಲೀಸ್ ಇಲಾಖೆಯ ಮೇಲಿನ ಅಧಿಕಾರಿಗಳಿಗೆ ದೂರು ಸಲ್ಲಿಸಿರುವುದಿಲ್ಲ. ನಾನು ಆರೋಪಿಯಾಗಿ ಕ್ರಿಮಿನಲ್ ಪ್ರಕರಣ ನಡೆದು ನಾನು ಬಿಡುಗಡೆ ಅಗಿರುತ್ತೇನೆ.

2) ಮೊದಲು ಮಳವಳ್ಳಿಯ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಬೆಂಗಳೂರಿನ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಬಲತೊಡೆಗೆ ಶಸ್ತ್ರ ಚಿಕಿತ್ಸೆಯಾಗಿ ರಾಡು ಹಾಕಿದ್ದು, ಈಗಲೂ ಇರುತ್ತದೆ. ಡಾಃ ಸಂಜಯ್ ರವರು ನನಗೆ ಚಿಕಿತ್ಸೆ ನೀಡಿರುತ್ತಾರೆ. ನಾನು ಅಸ್ಪತ್ರೆಯಿಂದ ಬಿಡುಗಡೆಯಾಗಿ 8 ವರುಷಗಳು ಕಳೆದಿರುತ್ತದೆ. ಅನಂತರ ಸಹ ನಾನು ಅಸ್ಪತ್ರೆಗೆ ಹೋಗಿದ್ದು ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ನಾನು ಕೊನೆಯದಾಗಿ 2018 ರಲ್ಲಿ ಅಸ್ಪತ್ರೆಗೆ ಹೋಗಿದ್ದು, ಅನಂತರ ಅಗಾಗ್ಗೆ ಚಿಕಿತ್ಸೆಗೆ ಹೋಗುತ್ತಿರುತ್ತೇನೆ ಆ ಸಂಬಂದವಾಗಿ ದಾಖಲೆ ಹಾಜರುಪಡಿಸಿರುವುದಿಲ್ಲ. ನನಗೆ 42 ವರುಷ ವಯಸ್ಸಾಗಿರುತ್ತದೆ. ನಾನು ಹಾಜರುಪಡಿಸಿರುವ ನಿಪಿ-10 ನನಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಾನು ಅಸ್ಪತ್ರೆಗೆ ಖರ್ಚು ಮಾಡಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ 50 ವರುಷಕ್ಕಿಂತ ಹೆಚ್ಚು

ವಯಸ್ಸಾಗಿದೆ ಎಂದರೆ ಸರಿಯಲ್ಲ. ನಾನು ವಯಸ್ಸಿಗೆ ಸಂಬಂದಿಸಿದಂತೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3) ನಾನು ಅಪಘಾತದ ಪೂರ್ವದಲ್ಲಿ ವ್ಯವಸಾಯ ಮಾಡಿ ಮರದ ವ್ಯಾಪಾರ ಮಾಡಿ, ಗ್ರಾಮ ಪಂಚಾಯಿತಿ ಸದಸ್ಯ ಅಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನನ್ನ ತಂದೆಯ ಹೆಸರಿನಲ್ಲಿ ಅಸ್ತಿಗಳು ಇದ್ದು, ಈ ಸಂಬಂಧವಾಗಿ ದಾಖಲೆ ಹಾಜರುಪಡಿಸಿಲ್ಲ. ನಾನು ಈ ಮೇಲೆ ಹೇಳಿದ ವೃತ್ತಿಯನ್ನು ಈಗಲೂ ಮುಂದುವರೆಸುತ್ತಿದೇನೆ. ನನ್ನ ತಪ್ಪಿನಿಂದ ಅಪಘಾತವಾಗಿರುವುದರಿಂದ 3ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ